

# ಬೇಕಿರುವುದು ವಿಜ್ಞಾನದ ವೈಜ್ಞಾನಿಕತೆ

**ಕೈಗೆ ನೆತ್ತರಂಟದ, ಸದ್ದಿಲ್ಲದ ಯುದ್ಧ ನಡೆಯುತ್ತಲೇ ಇದೆ. ಮನುಷ್ಯ ನಾಗರಿಕತೆಯ ಅಂಧಕಾರ ಯುಗ, ಅತ್ಯಾಧುನಿಕ ಸೌಲಭ್ಯಗಳ ಈ ಕಾಲದಲ್ಲಿದೆ. ಈ ವಿಕಾರ ಬೆಳವಣಿಗೆಯನ್ನು ತಡೆಯಬೇಕಿರುವುದು ಸಂವೇದನಾಶೀಲತೆಯ ಕರ್ತವ್ಯ.**

■ ವಿನಯಾ ಒಕ್ಕುಂದ

ವಿಜ್ಞಾನ ನಮ್ಮ ದೇಹ–ಮನಸ್ಸುಗಳನ್ನು ಪೊರೆವ, ಬದುಕಿನ ಮೂಲಚೂಲಗಳನ್ನು ವ್ಯಾಪಿಸಿಕೊಂಡಿರುವ ಅಖಂಡ ಸತ್ಯ. ಪ್ರಯೋಗಾಲಯಕ್ಕೆ ಸಂಬಂಧಿಸಿದ ಜ್ಞಾನಶಿಸ್ತು ಮಾತ್ರವೇ ಅಲ್ಲ, ಅದು ಬದುಕಿನ ಋತದ ನಿರಂತರ ಶೋಧ ಮಾರ್ಗ. ಈ ಮಾರ್ಗ ಅಸ್ತವ್ಯಸ್ತಗೊಂಡರೆ ಬದುಕೂ ಅಸ್ತವ್ಯಸ್ತಗೊಳ್ಳುತ್ತದೆ. ಸಾಹಿತ್ಯ–ಕಲೆಗಳೂ ಮನುಷ್ಯ ಬಾಳಿನೊಂದಿಗಿನ ಅನುಸಂಧಾನದಲ್ಲಿಯೇ ಅರಳಬೇಕಿರುವುದರಿಂದ, ಅದು ವಿಜ್ಞಾನದೊಂದಿಗೂ ಸಹಬಾಳನ್ನು ಹೊಂದಿದೆ.

ಮನುಷ್ಯ ಚರಿತ್ರೆಗೆ ಎರಡು ಪಾದಗಳಿವೆ: ಒಂದು ಕಲೆ, ಇನ್ನೊಂದು ವಿಜ್ಞಾನ. ಭಾರತೀಯ ಕಾವ್ಯಮೀಮಾಂಸೆ ಪ್ರತಿಭೆಯ ಕಾರಣಗಳಲ್ಲಿ ಒಂದಾಗಿ ಗುರ್ತಿಸುವ ವ್ಯುತ್ಪತ್ತಿ, ಸಕಲ ಚರಾಚರಗಳ ಕುರಿತು ಕವಿ ಹೊಂದಿರಬೇಕಾದ ಜ್ಞಾನ. ಈ ತಿಳಿವು ವಿಜ್ಞಾನದ ಸತ್ಯದ ಪ್ರಮಾಣವೇ. ವಿಜ್ಞಾನ ಮತ್ತು ಕಲೆಗಳ ಬಂಧ ಅನನ್ಯವಾದದ್ದು. 'ಬೌದ್ಧಿಕ ಸೌಂದರ್ಯವೇ ನಿಜವಾದ ಉನ್ನತ ಸೌಂದರ್ಯ. ಮಾನವನ ಸೌಂದರ್ಯಾನ್ವೇಷಕ ಮತ್ತು ಬೌದ್ಧಿಕ ಚಟುವಟಿಕೆಗಳ ಸಂಯೋಜನೆಯೇ ವಿಜ್ಞಾನ. ಆದ್ದರಿಂದ ಅದೊಂದು ಶ್ರೇಷ್ಠ ಸೃಜನಶೀಲ ಕಲೆ' ಎನ್ನುತ್ತಾರೆ ಸಿ.ವಿ. ರಾಮನ್. 'ಸೃಜನಶೀಲತೆ ಜ್ಞಾನಕ್ಕಿಂತ ದೊಡ್ಡದು' ಎಂದ ಐನ್‌ಸ್ಟೀನ್ ಈ ಅಂತರ್‌ಗಮ್ಯದ ಗಾಢತೆಯನ್ನು ಹೇಳುತ್ತಾರೆ. ವಿಜ್ಞಾನ ಮತ್ತು ಸಾಹಿತ್ಯ ಈ ಎರಡರ ಗಮನವೂ ಮನುಷ್ಯ ಬದುಕಿನ ಘನತೆಯನ್ನು ಎತ್ತರಿಸುವುದೇ ಆಗಿದೆ. ಅವುಗಳ ಪರಿಭಾಷೆ ಬೇರೆ. ಅಂತಃಸತ್ವ ಒಂದೇ. ಗಾಳಿ ಶ್ವಾಸಕಾಂಗದ ಒಳ–ಹೊರಗೆ ಲಾಳಿಯಾಡುವ ಉಸಿರಾಟದ ಪಾಠವನ್ನು ಕಲಿಯುವುದು; ನೆಲನೊಂದೇ ಹೊಲಗೇರಿ ಶಿವಾಲಯಕೆ, ಜಲವೊಂದೇ ಶೌಚಾಚಮನಕ್ಕೆ' ಎಂಬ ವಚನವನ್ನು ಕಲಿಯುವುದು ಬೇರೆ ಬೇರೆಯಲ್ಲ. ಪ್ರಯೋಗಾಲಯದಲ್ಲಿ ಕೃತಕವಾಗಿ ಉತ್ಪಾದಿಸಲಾಗದ ಮನುಷ್ಯ ರಕ್ತದ ಕುರಿತು ಅಧ್ಯಯನಿಸಿದವರಿಗೆ ಶುದ್ಧರಕ್ತದ ಬೊಗಳೆಯಾಡುವ ರಾಜಕಾರಣ ತಿಳಿಯುತ್ತದೆ.

ನಾವೀಗ ನಿಂತಿರುವುದು ವಿಜ್ಞಾನವನ್ನು ತಂತ್ರಜ್ಞಾನವಾಗಿ ಉಪಯೋಗಿಸಿಕೊಳ್ಳುತ್ತಿರುವ ತಪ್ಪು ಕಾಲದಲ್ಲಿ. ಆಧುನಿಕತೆಯೊಂದಿಗೇ ವಿಜ್ಞಾನದ ತಾಂತ್ರಿಕ ಮುಖ ಹೆಚ್ಚು ವೈಭವೀಕರಣಕ್ಕೆ ಒಳಗಾಯಿತು. ಕುವೆಂಪು ಅವರಿಗೆ ಈ ಬಗ್ಗೆ ಖಚಿತ ಮುನ್ನೋಟವಿತ್ತು. 'ನಾವು ವಿಜ್ಞಾನ ಸಲಕರಣೆಗಳ ಉಪಯೋಗವನ್ನು ಕಲಿತೆವು. ವೈಜ್ಞಾನಿಕ ಮನೋಧರ್ಮವನ್ನು ಕಲಿಯಲಿಲ್ಲ' ಎಂದಿದ್ದರು. 'ವಿಜ್ಞಾನ ಬುದ್ಧಿ', 'ವಿಜ್ಞಾನ ದೀವಿಗೆ' ಎಂಬ ಪರಿಕಲ್ಪನೆಗಳನ್ನು ಕೊಟ್ಟರು. ವಿಜ್ಞಾನ ಆತ್ಯಂತಿಕವಾಗಿ ಮನುಷ್ಯ ಬಾಳಿನ ಒಂದುತನವನ್ನು ಸಾಬೀತುಪಡಿಸುವ ಶಿಸ್ತು. 'ಮನುಷ್ಯಜಾತಿ ತಾನೊಂದೆ ವಲಂ' ಎಂಬ ಆದಿಕವಿಯ ನುಡಿಯಲ್ಲಿ ವಿಜ್ಞಾನವಿದೆ. 'ಸ್ವರ್ಗಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ' ಎಂಬ ಬಸವಣ್ಣನಲ್ಲಿ, 'ಕಲ್ಲು ಮನೆಯ ಮಾಡಿ, ಕಲ್ಲ ದೇವರ ಮಾಡಿ, ಆ ಕಲ್ಲು ಈ ಕಲ್ಲ ಮೇಲೆ ಕೆಡೆದಂತೆ ದೇವರೆತ್ತ ಹೋಹುದೋ' ಎಂದ ಅಲ್ಲಮನಲ್ಲಿ; ಸರ್ವಜ್ಞನ ನುಡಿಗಳಲ್ಲಿ ವಿಜ್ಞಾನದ ಸತ್ಯವಿದೆ.

ನಮ್ಮ ಜನಪದರು ಅನಕ್ಷರಸ್ಥರಿದ್ದರು. ಆದರೆ ಅಜ್ಞಾನಿಗಳಾಗಿರಲಿಲ್ಲ. ಅವೈಜ್ಞಾನಿಕರಾಗಿರಲಿಲ್ಲ. ವೈಜ್ಞಾನಿಕ ಸಂಶೋಧನೆಗಳು ವಿರಳವಾಗಿದ್ದ ಕಾರಣ ಮೂಢನಂಬಿಕೆಗಳು ಆಗ ಇದ್ದವು. ಅದನ್ನು ಮೀರಿದ ವೈಜ್ಞಾನಿಕ ಮನೋಧರ್ಮವೂ ಇತ್ತು. 'ಶ್ರೀಕೃಷ್ಣಪಾರಿಜಾತ' ಬಯಲಾಟದ ಮೊದಲ ಅಧ್ಯಾಯದ ಗಜಾನನ ಸ್ತುತಿಯ ಭಾಗದಲ್ಲಿರುವ ವಾಗ್ವಾದವನ್ನು ಗಮನಿಸಿದರೆ, ನಿಖರ ವೈಜ್ಞಾನಿಕತೆಗೆ ಬೆರಗಾಗುತ್ತದೆ.

ಇಂದೀಗ ವಿಜ್ಞಾನದ ತಂತ್ರಜ್ಞಾನದ ಮುಖ ಮಾತ್ರ ವಿಪರೀತ ಬೆಳೆದ ಸ್ಥಿತಿಯಿದೆ. ಇನ್ನೂ ಅಪಾಯಕಾರಿ ಸ್ಥಿತಿಯೆಂದರೆ, ತಾಂತ್ರಿಕ ಉನ್ನತಿಯನ್ನು ಅವೈಜ್ಞಾನಿಕ ಮೌಢ್ಯಗಳು ಆವರಿಸಿಕೊಂಡಿವೆ. ಮೊಬೈಲ್, ಟಿ.ವಿ. ಗಳಂಥ ಸಂವಹನ ಜಾಲಗಳು ಹುಸಿತನವನ್ನು ಬೆಳೆಸುತ್ತಿವೆ. ವೈಜ್ಞಾನಿಕ ತಿಳಿವಿನ ಮರೆವು, ದ್ವೇಷ ಲಂಪಟತನವನ್ನು ಹೆಚ್ಚಿಸಿದೆ. ಕೈಗೆ ನೆತ್ತರಂಟದ, ಸದ್ದಿಲ್ಲದ ಯುದ್ಧ ನಡೆಯುತ್ತಲೇ ಇದೆ. ಮನುಷ್ಯ ನಾಗರಿಕತೆಯ ಅಂಧಕಾರ ಯುಗ, ಅತ್ಯಾಧುನಿಕ ಸೌಲಭ್ಯಗಳ ಈ ಕಾಲದಲ್ಲಿದೆ. ಈ ವಿಕಾರ ಬೆಳವಣಿಗೆಯನ್ನು ತಡೆಯಬೇಕಿರುವುದು ಸಂವೇದನಾಶೀಲತೆಯ ಕರ್ತವ್ಯ. ಇಲ್ಲದಿದ್ದರೆ ಮಾನವೀಯತೆ ನಷ್ಟವನ್ನನುಭವಿಸುತ್ತದೆ.

ಕಾಲದಿಂದ ಕಾಲಕ್ಕೆ ಸಾಹಿತ್ಯ, ವಿಜ್ಞಾನದಿಂದ ಪ್ರಯೋಜನವನ್ನು ಪಡೆದುಕೊಂಡೇ ಬಂದಿದೆ. ಮುದ್ರಣ ಯಂತ್ರಗಳಿಲ್ಲದಿದ್ದರೆ, ಸಾರಿಗೆಯ ಕ್ರಾಂತಿಯಾಗದಿದ್ದರೆ ಸಾಹಿತ್ಯದಲ್ಲಿ ಆಧುನಿಕತೆಯ ಪ್ರವೇಶ ಸಾಧ್ಯವಿರಲಿಲ್ಲ. ಈ ಪರಸ್ಪರ ಸಾತತ್ಯ ಸಮಾಜದ ಆರೋಗ್ಯವನ್ನು ಕಾದಿದೆ. ಆದರೆ, ತಂತ್ರಜ್ಞಾನದ ಧಾರಾಳ ಅನುಕೂಲ – ಪುಸ್ತಕ ಮುದ್ರಣ, ಪ್ರಕಟಣೆ; ಅನುವಾದವನ್ನು ಸುಲಭವಾಗಿಸುವ ಆ್ಯಪ್‌ಗಳು; ಮಾಹಿತಿಯನ್ನು ಸುಲಭಸಾಧ್ಯವಾಗಿಸಿರುವ ಆ್ಯಪ್‌ಗಳು, ಹೀಗೆ ಉಪಕೃತವಾದ ಬರವಣಿಗೆ ಸಮಾಜವನ್ನು ಎಷ್ಟರಮಟ್ಟಿಗೆ ಪ್ರಜ್ಞಾವಂತಿಕೆಯಲ್ಲಿಡುತ್ತಿದೆ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ವಿಜ್ಞಾನವೂ ವೈಜ್ಞಾನಿಕವಾಗಬೇಕಾದ ಈ ಹೊತ್ತಿನಲ್ಲಿ ವಿಜ್ಞಾನ ಮತ್ತು ಸಾಹಿತ್ಯ ಸಂಕರಶೀಲತೆ ಇನ್ನೂ ಗಾಢವಾಗಬೇಕಿದೆ.

■